# ಪ್ರಜಾಕೀಯ ಐ ಲವ್ ಯೂ!



'ಉಪೇಂದ್ರ' ಎಂದಾಕ್ಷಣ ಅವರ ಸಿನಿಮಾ ಹೆಸರಿಗಿಂತ ಅವರ 'ಕೆಪಿಜೆಪಿ' ಪಕ್ಷವೇ ನೆನಪು ಬರುವಷ್ಟು ರಾಜಕೀಯದಲ್ಲಿ ಸಕ್ರಿಯರಾಗಿದ್ದರು ಉಪ್ಪಿ. ಆದರೆ ಚುನಾವಣೆಯ ಹೊಸ್ತಿಲಲ್ಲಿ ಅವರಿಗೂ ಇನ್ನು ಕೆಲವು ಮುಖಂಡರಿಗೂ ಆದ ಮನಸ್ತಾಪದಿಂದ ತಾವೇ ಕಟ್ಟಿದ ಪಕ್ಷದಿಂದ ಹೊರಬರಬೇಕಾದ ಪರಿಸ್ಥಿತಿ ಅವರದಾಗಿತ್ತು. ಆದರೆ ತಮ್ಮ ರಾಜಕೀಯ ನಿಲುವಿನಿಂದ ಕೊಂಚವೂ ಹಿಂಜರಿಯದ ಅವರು 'ಪ್ರಜಾಕೀಯ' ಪಕ್ಷವನ್ನು ಕಟ್ಟಿ ಮತ್ತೆ ಸಕ್ರಿಯರಾಗುವುದಾಗಿ ಹೇಳಿದ್ದಾರೆ.

ಉಪ್ಪಿ ರಾಜಕೀಯದಲ್ಲಿಯೇ ಮುಂದುವರಿದರೆ ಸಿನಿಮಾಗಳಲ್ಲಿ ನಟಿಸುವುದೇ ಇಲ್ಲವೇ? ಇಂಥದ್ದೊಂದು ಪ್ರಶ್ನೆ ಅವರ ಅಭಿಮಾನಿಗಳಲ್ಲಿ ಏಳುತ್ತಲೇ ಇದೆ. ಆದರೆ ಅವರ ಸಂದೇಹಗಳಿಗೆ ಉತ್ತರ ನೀಡುವಂತೆ ಇತ್ತೀಚೆಗೆ ಆರ್. ಚಂದ್ರು ಅವರ ಹೊಸ ಸಿನಿಮಾದಲ್ಲಿ ಅವರು ನಾಯಕನಾಗಿ ನಟಿಸುತ್ತಿದ್ದಾರೆ. ಚಿತ್ರದ ಹೆಸರು 'ಐ ಲವ್ ಯೂ'!

ಉಪೇಂದ್ರ ಅವರ ರಿಯಲ್ ಇಮೇಜ್ ಅನ್ನೂ ಬಳಸಿಕೊಂಡು ಚಂದ್ರು ಈ ಚಿತ್ರದ ಕಥೆ ಕಟ್ಟಿದ್ದಾರಂತೆ. ಹಾಗಾಗಿ ಲವ್ ಎನ್ನುವುದನ್ನು ಒಂದು ಸನ್ನೆಯ ಮೂಲಕವೇ ಅವರು ಬಿಂಬಿಸುತ್ತಿದ್ದಾರೆ. ಈ ಚಿತ್ರದ ಮುಹೂರ್ತಕ್ಕೆ ಬಂದ ಉಪ್ಪಿಗೆ ಮತ್ತೆ ಎದುರಾಗಿದ್ದು ರಾಜಕೀಯಕ್ಕೆ ಸಂಬಂಧಿಸಿದ ಪ್ರಶ್ನೆಗಳೇ.

ರಾಜಕೀಯ ಸುಧಾರಣೆಯ ಕುರಿತು ಅವರು ಮಾತನಾಡುತ್ತಿದ್ದರೆ ಹೊಸ ಸಿನಿಮಾದ ಕಥೆಯೇನೋ ಎಂದು ಅನಿಸಿದರೆ ಅಚ್ಚರಿಯಿಲ್ಲ. ಇಂದು ಆಡಳಿತಕ್ಕೆ ಡಿಜಿಟಲ್ ಟಚ್ ಬೇಕಿದೆ ಎನ್ನುತ್ತಾರೆ ಅವರು. ತಾವು ಮಾಡುತ್ತಿರುವ ಕೆಲಸವನ್ನು ವೀಡಿಯೊ ಮಾಡಿ ಎಲ್ಲ ಜನರಿಗೂ ತಲುಪಿಸಬೇಕು. ಪರೀಕ್ಷೆ ಬರೆದು ಚುನಾವಣೆಗೆ ಸ್ಪರ್ಧಿಸುವಂತಾಗಬೇಕು.. ಹೀಗೆ ಅವರ ಸಲಹೆಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಈ ಎಲ್ಲವನ್ನೂ ಮುಂದೆ ಎಂದಾದರೂ ಈಡೇರಿಸುವ ನಂಬಿಕೆಯೂ ಅವರಿಗಿದೆ. ಆದರೆ ಸದ್ಯಕ್ಕೆ ರಾಜಕೀಯದಿಂದ ಕೊಂಚ ದೂರವಿದ್ದು ಸಿನಿಮಾಗಳಲ್ಲಿಯೇ ಅವರು ಬ್ಯುಸಿಯಾಗಿದ್ದಾರೆ. ಒಪ್ಪಿಕೊಂಡಿರುವ ಐದಾರು ಸಿನಿಮಾಗಳನ್ನು ಮುಗಿಸಿದ ನಂತರ ತಾವೇ ಒಂದು ಸಿನಿಮಾ ನಿರ್ದೇಶಿಸುವ ಸಿದ್ಧತೆಯನ್ನೂ ಅವರು ನಡೆಸಿದ್ದಾರೆ.

ಅವರ ನಿರ್ದೇಶನದ ಹಲವು ಸಿನಿಮಾಗಳು ಗೆದ್ದಿವೆ. ಆದರೆ ವಾಸ್ತವ ಬದುಕಿನಲ್ಲಿ ಪಕ್ಷವೊಂದನ್ನು ನಿರ್ದೇಶಿಸಿ ಗೆಲ್ಲಿಸುವ ಅವರ ಕನಸು ಎಂದು ನನಸಾಗುತ್ತದೆ ಎನ್ನುವುದಕ್ಕೆ ಕಾಲವೇ ಉತ್ತರಿಸಬೇಕು.

# ಹ್ಯಾಪಿ ಬರ್ತ್‌ಡೇ ರಾಗಿಣಿ



'ನಾನು ಅಭಿಮಾನಿಗಳನ್ನು ಮಿಸ್ ಮಾಡ್ಕೊಳ್ತಿದ್ದೀನಿ' ಹೀಗೆಂದು ಎದುರಿನ ಬಣ್ಣದ ದೀಪದಲ್ಲಿಯೇ ದೃಷ್ಟಿ ನೆಟ್ಟರು ರಾಗಿಣಿ ದ್ವಿವೇದಿ. ಆ ದೀಪವೂ ಇವರ ಮುಖದ ಭಾವವನ್ನು ಅರಿಯಲು ಶತಪ್ರಯತ್ನ ನಡೆಸುತ್ತಿರುವಂತಿತ್ತು. 'ತನಗೆ ಇಷ್ಟು ಪ್ರೀತಿ ತೋರಿದ, ತೋರುತ್ತಿರುವ ಅಭಿಮಾನಿಗಳಿಗೆ ಹೇಗೆ ಕೃತಜ್ಞತೆ ತೋರುವುದು? ಮುಂದೆ ಸಾಕಷ್ಟು ವೈವಿಧ್ಯದ ಒಳ್ಳೆಯ ಸಿನಿಮಾಗಳನ್ನು ಮಾಡುತ್ತ ಹೋಗುತ್ತೇನೆ. ಇದೇ ಅವರಿಗೆ ನಾನು ನೀಡುವ ಕೃತಜ್ಞತೆ' ಎಂದು ಪ್ರಶ್ನೆ ಕೇಳಿಕೊಂಡು ತಾವೇ ಉತ್ತರವನ್ನೂ ಮುಂದಿಟ್ಟರು.

ಅದು ಮೇ 23. ಬೆಂಗಳೂರಿನ ಎಂ.ಜಿ. ರಸ್ತೆಯಲ್ಲಿರುವ ಒಂದು ಕ್ಲಬ್‌ನಲ್ಲಿ ರಾಗಿಣಿ ಜಗಮಗಿಸುವ ದಿರಿಸು ತೊಟ್ಟು ನಿಂತಿದ್ದರು. ಅವರ ಕುಟುಂಬವೂ ಜತೆಯಲ್ಲಿತ್ತು. ಎದುರಿನಲ್ಲಿ ಹುಟ್ಟುಹಬ್ಬದ ಕೇಕ್ ಕತ್ತರಿಸಿಕೊಳ್ಳಲು ಸಿದ್ಧವಾಗಿ ನಿಂತಿತ್ತು.

ಹೌದು, ರಾಗಿಣಿಗೆ ಈಗ 28.

2009ರಲ್ಲಿ ಬಿಡುಗಡೆಯಾದ 'ವೀರ ಮದಕರಿ' ಸಿನಿಮಾದಲ್ಲಿ ಸುದೀಪ್ ಅವರಿಂದ ಸೊಂಟಕ್ಕೆ ಚಿವುಟಿಸಿಕೊಂಡು 'ಜಿಂತಾತಾ ಚಿತಾ ಚಿತಾ' ಎನ್ನುತ್ತಾ ಚಿತ್ರರಂಗಕ್ಕೆ ಬಂದ ಹುಡುಗಿ, ಇಷ್ಟು ಕಾಲ ಚಿತ್ರರಂಗದಲ್ಲಿ ಉಳಿದುಕೊಳ್ಳಬಹುದು ಎಂದು ಯಾರೂ ಊಹಿಸಿರಲಿಲ್ಲ. ಅದಕ್ಕೆ ಕಾರಣಗಳೂ ಇದ್ದವೆನ್ನಿ. ಮೈಮರೆಸುವಷ್ಟು ರೂಪರಾಶಿಯಾಗಲಿ, ತನ್ಮಯಗೊಳಿಸುವ ನಟನಾ ಪ್ರತಿಭೆಯಾಗಲಿ ಇರುವಂಥ ನಟಿಯಲ್ಲ ಅವರು. ಆದರೆ ಚಿತ್ರರಂಗದಲ್ಲಿಯೇ ಉಳಿಯಬೇಕು, ಬೇರೆ ಬೇರೆ ರೀತಿಯ ಪಾತ್ರಗಳ ಮೂಲಕ ಗುರ್ತಿಸಿಕೊಳ್ಳಬೇಕು ಎಂಬ ಛಲ ಮಾತ್ರ ಯಾವುದಕ್ಕೂ ಕಮ್ಮಿ ಇರಲಿಲ್ಲ. ಹಲವು ಚಿತ್ರಗಳಲ್ಲಿ ನಾಯಕಿಯಾಗಿ ನಟಿಸಿ ಮಹಿಳಾ ಪ್ರಧಾನ ಸಿನಿಮಾಗಳಲ್ಲಿಯೂ ಮಿಂಚಿದರು. ಮಿತಿ ಮೀರಿ ದಪ್ಪಗಾಗಿದ್ದಾರೆ ಎಂಬ ಟೀಕೆಗಳಿಗೆ ತಲೆಕೆಡಿಸಿಕೊಳ್ಳದೆ 'ತುಪ್ಪ ಬೇಕಾ ತುಪ್ಪ' ಎಂದು ಪಡ್ಡೆ ಹುಡುಗರ ನಡು ಕಂಪಿಸುವ ಹಾಗೆ ಕುಣಿದರು. ಆಮೇಲೆ ಒಮ್ಮಿಂದೊಮ್ಮೆಲೇ 'ಕ್ರಶ್ ಡಯಟ್'ಗೆ ತಮ್ಮ ದೇಹವನ್ನು ಒಪ್ಪಿಸಿ, ಅವರ ದಪ್ಪ ದೇಹ ಟೀಕಿಸಿದವರೂ ಕನಿಕರ ಪಡುವಷ್ಟು ಸಣಕಲಾದರು.

ಪ್ರತಿವರ್ಷ ತಮ್ಮ ಹುಟ್ಟುಹಬ್ಬದ ದಿನ ಪತ್ರಕರ್ತರು ಮತ್ತು ಆಪ್ತರಿಗೆ ಔತಣಕೂಟ ಏರ್ಪಡಿಸುವ ರೂಢಿಯನ್ನು ರಾಗಿಣಿ ಬೆಳೆಸಿಕೊಂಡಿದ್ದಾರೆ. ಈ ವರ್ಷದ ಜನ್ಮದಿನದ ಸಂಭ್ರಮಕ್ಕೆ ಅವರ ಸಹೋದರನೇ ವಿನ್ಯಾಸ ಮಾಡಿದ ಉಡುಪಿನಲ್ಲಿ ಅವರು ಮಿಂಚುತ್ತಿದ್ದರು. 'ಮದುವೆ ಯಾವಾಗ?' ಎನ್ನುವ ಪ್ರಶ್ನೆಯಿಟ್ಟವರಿಗೆ ಸುಂದರ ನಗುವಿನ ಕಾಣಿಕೆ ಕೊಟ್ಟು ನುಣುಚಿಕೊಳ್ಳುವ ಜಾಣತನವನ್ನೂ ಅವರು ತೋರಿಸಿದರು. ಹ್ಯಾಪಿ ಬರ್ತ್‌ಡೇ ಎಂಬ ಅಕ್ಷರಗಳುಳ್ಳ ದೊಡ್ಡ ಕೇಕ್ ಕತ್ತರಿಸುವಾಗ ಇನ್ನಷ್ಟು ವರ್ಷ ಬಣ್ಣದ ಲೋಕದಲ್ಲಿ ಉಳಿಯುವ, ಹೊಸ ಹೊಸ ಬಗೆಯಲ್ಲಿ ತೆರೆಯ ಮೇಲೆ ಬರುವ ಆಕಾಂಕ್ಷೆ ಅವರಲ್ಲಿ ಎದ್ದು ಕಾಣುತ್ತಿತ್ತು.